SRI A. R. BADRINARAYAN.—Naturally from the date it becomes due.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದಿನ ಸರ್ಕಾರದವರು ಸಹ ಈ ಟ್ರಿಬಲ್ ಬೆನಿಫಿಟ್ ಸ್ಕೀಮನ್ನು ಜಾರಿಗೆ ಕೊಡಂತ್ತೇವೆಂದು ಭರವಸೆ ಕೊಟ್ಟಿದ್ದರಂ. ಈಗ ತಾವು ಸಹ ಪುನಃ ಕನ್ಸಿಡರೇಶನ್‌ನಲ್ಲಿ ಇದೆಯೆಂದು ಹೇಳುತ್ತಿದ್ದೀರಿ ಆದ್ದರಿಂದ ಇದನ್ನು ಯಾವಾಗ ಕನ್ಸಿಡರ್ ಮಾಡುತ್ತೀರಿ ಮತ್ತು ಯಾವಾಗ ಜಾರಿಗೆ ಕೊಡುತ್ತೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ಅವರು ಹಿಂದಿನಿಂದ ಕೊಡಬೇಕೆಂದು ಕೇಳುತ್ತಿದ್ದರು. ಈಗ ನಂತರದ ಡೇಟಿನಿಂದ ಕೊಡಬೇಕೆಂದು ಹೇಳುತ್ತಿದ್ದಾರೆ ಇದಕ್ಕೆ ಫಿನಾನ್ಸಿಯಲ್ ಇಂಪ್ಲಿಕೇಶನ್ ಎಷ್ಟು ಆಗುತ್ತದೆ ಎಂಬುದನ್ನು ನೋಡಬೇಕಾಗಿರುವುದರಿಂದ ನಿಧಾನವಾಗಿದೆ.

SRI S. M. YAHYA.—Is it a fact that Triple benefit schsme has already been extended to the Private Colleges affiliated to the Karnatak University ?

SRI A. R. BADRINARAYAN.—I want notice

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಈ ಟ್ರಿಪಲ್ ಬೆನಿಫಿಟ್ ಸ್ಕೀಮನ್ನು ಕಾಲೇಜುಗಳ ಉಪಾಧ್ಯಾಯರುಗಳಿಗೆ ಕೊಟ್ಟರೆ ಎಷ್ಟು ಹೆಚ್ಚು ಹಣ ಬೇಕಾಗುತ್ತದೆ.

ಶ್ರೀ ಎ. ಆರ್, ಬದರಿನಾರಾಯಣ.—ಅದನ್ನು ಈಗ ಲೆಕ್ಕ ಹಾಕುತ್ತಿದ್ದೇವೆ. ಆದ್ದರಿಂದ ಸ್ವಲ್ಪ ನಿಧಾನವಾಗುತ್ತಿದೆ.

ಶ್ರೀ ಟಿ. ಆರ್. ಶಾಮಣ್ಣ.—ಕಾಲೇಜುಗಳ ಉಪಾಧ್ಯಾಯರು ಬಹಳ ಕಾತುರತೆಯಿಂದ ಒತ್ತಾಯ ಮಾಡುತ್ತಾ ಇರುವುದರಿಂದ ಆದಷ್ಟು ಜಾಗ್ರತೆ ಮಾಡುತ್ತೇವೆಂದು ಇದರ ಬಗ್ಗೆ ಆಶ್ವಾಸನೆಯನ್ನು ಕೊಡುತ್ತೀರಾ ?

SRI A. R. BADRINARAYANA.—Certainly.

DISPOSAL OF SPARE AND TOOLS SUPPLIED FREE BY THE COMPANY

490. SRI U. T. FAREED (Mangalore)—

Will the Minister for Labour be pleased to state:—

(*a*) whether it is a fact that when a Lsyland bus is purchased the tools and spares worth about Rs. 3,060 are given free with a bus ;

(*b*) if so, whether such tools and spares received by Mysore State Road Transport Corporation are taken in to stock ;

(*c*) whether it has come to their notice that such tools and spares have been disposed of by the authcrities without taking them into stock ?

SRI AZEEZ SAIT (Minister for Labour).—

(*a*) Yes. but not free. The cost of tools and spares is included in the chassis price.

(*b*) Yes.

(*c*) No.

ಶ್ರೀ ಯು. ಟಿ. ಫರೀದ್.—ಈ ಲೇಲೆಂಡ್ ಬಸ್ಸುಗಳಲ್ಲದೆ ಬೇರೆ ಬಸ್ಸುಗಳನ್ನು ಸಹ ಕೊಂಡು ಕೊಳ್ಳುವಾಗ ಈ ಉಪಕರಣಗಳನ್ನು ಹಾಗೂ ಬಿಡಿ ಭಾಗಗಳನ್ನು ಫ್ರೀಯಾಗಿ ಒದಗಿಸುತ್ತಾರೆಯೇ ?

SRI AZEEZ SAT. -Tools are being given along with the chassis-whether it is leyland or Mercedes or any other chassis-certain norms of tools are given.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಚಾಸಿಸ್ ಕೊಂಡ.ಕೊಳ್ಳುವಾಗ ಟೂಲ್ಸ್ ಅಲ್ಲದೆ ಇಂತಿಷ್ಟು ಚಾಸಿಸ್ ಕೊಂಡರೆ ಒಂದು ಫಿಯೇಟ್ ಕಾರು ಕೊಡುವಂತಹ ಕ್ರಮ ಇದೆಯೇ ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ,

ಶ್ರೀ ಟಿ. ಎಂ. ವಂಜುನಾಥ.—ಈಗ ಲೇಲೆಂಡ್ ಜೊತೆಗೆ ಬೇರೆ ಬೆಡ್‌ಫೋರ್ಡ್ ಬೆಂಜ್ ಇತ್ಯಾದಿ ಬಸ್ಸುಗಳನ್ನು ಕೊಂಡುಕೊಳ್ಳುವ ಪ್ರಯತ್ನ ಮಾಡಿದ್ದೀರಾ ?

SRI AZEEZ SAIT —I have made it clear that we have decided to purchase Bed Ford, Dodge and Mercedes also.

ಶ್ರೀ ಯು ಟಿ. ಫರೀದ್.—ಈ ಟೂಲ್ಸ್‌ಗಳನ್ನು ವರ್ಕ್‌ಶಾಪಿನಲ್ಲಿ ಇಡುತ್ತೀರಾ ? ಅಥವಾ ದಾರಿಯಲ್ಲಿ ಏನಾದರೂ ಬಸ್ ಕೆಟ್ಟು ಹೋದರೆ ಬೇಕಾದಿತು ಎಂದು ಬಸ್ಸಿನಲ್ಲಿ ಅಥವಾ ಮಧ್ಯೆ ಬೇಕಾದ ಕಡೆಗಳಲ್ಲಿ ಇಡುವುದಕ್ಕೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಅಜೀಜ್‌ಸೇಟ್ —ಚಾಸಿಸ್ ತೆಗೆದುಕೊಳ್ಳುವ ಸಮಯದಲ್ಲಿ ರೀಜನಲ್ ವರ್ಕ್‌ಶಾಪಿನವರು ಚಾಸಿಸ್ ಜೊತೆಗೆ ಟೂಲ್ಸ್‌ಗಳನ್ನು ಪಡೆದುಕೊಂಡು ಅಲ್ಲಿಂದ ಬಸ್‌ಗಳನ್ನು ಸಂಬಂಧಪಟ್ಟ ಡಿವಿಜನ್ನಿಗೆ ತೆಗೆದುಕೊಂಡು ಹೊಗುವಾಗ ಟೂಲ್ಸ್‌ಗಳನ್ನು ಅದರಲ್ಲಿಡುತ್ತಾರೆ. ಅದೇ ರೀತಿ ನಾವು ಡೀಸೆಂಟ್ರಲೈಸ್ ಮಾಡುವಾಗ ಟೂಲ್ಸ್‌ಗಳನ್ನು ಸಹ ಚಾಸಿಸ್ ಜೊತೆಗೆ ರೆಸ್ಪೆಕ್ಟೀವ್ ಡಿಪೋಗೆ ಕಳಿಸುತ್ತೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ —ಈಗ ಬಜ್ಜಾಗಿ ೧೦೦-೧೫೦ ಚಾಸಿಸ್‌ಗಳನ್ನು ತೆಗೆದುಕೊಂಡರೆ ಅದರ ಜೊತೆಗೆ ಬೇರೆ ಏನಾದರೂ ಫ್ರೀಯಾಗಿ ಕೊಡುತ್ತಾರೆಯೇ ?

ಶ್ರೀ ಅಜೀಜ್ ಸೇಟ್ —ಇಂಥದ್ದು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ.

PICK POCKET CASES IN BELGAUM CITY

499. SRI B. B. SAYANAK (Belgaum).—

Will the Chief Minister be pleased to state.—

(*a*) the number of pick-pocket cases and the number of persons who lost their money in the month of May 1972 in Belgaum City;

(*b*) the number of such cases detected by the police in Belgaum during that month ?

SRI K. H. PATIL (Minister for Agriculture and Forest) (On behalf of

SRI D. DEVARAJ URS (Chief Minister).—

(*a*) There were two cases of pick-pocketing in which two persons lost their money.

(*b*) 1 case of pick-pocketing was detected.